20

# ಕೊನೆಯ ದಿನ

## (ಮತ್ತಾಯ 26:45-27:66 ಮತ್ತು ಸಮಾನಾಂತರ ವಾಕ್ಯಭಾಗಗಳು)

**ಪೀಠಿಕೆ.**-ಕ್ರಿಸ್ತನ ಜೀವಿತಕ್ಕಿಂತ ಹೆಚ್ಚಾಗಿ ಆತನ ಮರಣವನ್ನು ಕುರಿತು ಹೆಚ್ಚು ಬಲವಾಗಿ ಹೇಳುತ್ತೇವೆ ಎಂದು ಕೆಲವು ಸಲ ಅನ್ನಿಸುತ್ತದೆ. ಅದು ಸಾಧ್ಯವಿದೆ. ಅದರ ಮೇಲೆ ಕಠಿಣವಾದ ಯಾಂತ್ರಿಕ ವಿಧದಲ್ಲಿ ಅವಲಂಭಿಸುವ ಸಾಧ್ಯತೆಯಿದೆ, ಅದು ಶಿಲುಬೆಯನ್ನು ತಂದೆಯ ಪ್ರೀತಿಯ ಮತ್ತು ಯೇಸುವಿನ ಜೀವನದ ನೈಸರ್ಗಿಕ ನೆರವೇರುವಿಕೆಯಾಗಿ ಕ್ರೂಜೆಯನ್ನು ಮಾಡುವುದರಲ್ಲಿ ಸೋತು ಹೋಗುತ್ತದೆ. ಆದಾಗ್ಯೂ ಇದು ಬೈಬಲಿನಲ್ಲಿ ಹೇಳಿರುವ ಇತರ ಯಾವುದೇ ದಿನದ ಕಾರ್ಯಗಳಿಗಿಂತ ಹೆಚ್ಚು ಸಮಾನ ಪೂರ್ಣತೆಯಿಂದ ಇರುವುದಿಲ್ಲ ಎಂಬುದನ್ನು ಸೂಚಿಸುತ್ತದೆ. ಯೇಸುವಿನ ಇಡೀ ಜೀವಿತವು ಪೂರ್ಣವಾಗುವಂತೆ ಸಂಬಂಧಿಸಲ್ಪಟ್ಟಿದ್ದರೆ, ಇಡೀ ಹೊಸ ಒಡಂಬಡಿಕೆಯಂತೆ ದೊಡ್ಡದಾಗಿರುವ ನಾಲ್ಕುನೂರು ಗ್ರಂಥಗಳನ್ನು ತುಂಬುತ್ತಿತ್ತು.

**1. ಹಿಡಿದುಕೊಡಲ್ಪಟ್ಟದ್ದು.**-ಯೇಸುವು ಪ್ರಾರ್ಥಿಸುತ್ತಿದ್ದಾಗ ಮೂವರು ಶಿಷ್ಯರು ನಿದ್ರಿಸಿದರು. ಯೂದನು ಹಾಗೆ ಮಾಡಲಿಲ್ಲ. ತನ್ನ ಯೋಜನೆಗಳನ್ನು ಪೂರ್ತಿಗೊಳಿಸುವುದರಲ್ಲಿ ನಿರತನಾಗಿದ್ದನು. ಯೇಸು ತನ್ನ ಚಿನ್ನಹಗಳ ನಂತರ ಎದ್ದು, ಶಿಷ್ಯರ ಬಳಿಗೆ ಬಂದಾಗ, ಯೂದನು ಆಯುಧಗಳನ್ನೂ ದೀಪಗಳನ್ನೂ ಹಿಡಿದುಕೊಂಡ ಸಿಪಾಯಿಗಳ ಗುಂಪಿನೊಂದಿಗೆ ತೋಟವನ್ನು ಪ್ರವೇಶಿಸಿದನು. ಈ ಜನರು ಯೇಸುವನ್ನು ತಿಳಿದಿರಲಿಲ್ಲ; ಆದರೆ, ಅಲ್ಲಿ ತಪ್ಪು ಜರುಗಬಾರದೆಂದು, ಯೂದನು ಒಂದು ಸಂಕೇತವನ್ನು ಕೊಟ್ಟಿದ್ದನು; ಮತ್ತು ಅವನು ನೇರವಾಗಿ ಯೇಸುವಿನ ಬಳಿಗೆ ಹೋಗಿ, "ಗುರುವೇ, ನಮಸ್ಕಾರ"[1] ಎಂದು ಹೇಳಿ ಆತನಿಗೆ ಮುದ್ದಿಟ್ಟನು. ಗಲಿಲಾಯದ ಪ್ರಸಿದ್ಧ ಪ್ರವಾದಿಯನ್ನು ನೋಡಿದಾಗ ಆ ಸಿಪಾಯಿಗಳು ಭಯಗೊಂಡು ಹಿಂಜರಿದರು; ಮತ್ತು ಆಮೇಲೆ ಧೈರ್ಯ ತಂದುಕೊಂಡು ಅವರು ಯೇಸುವನ್ನು ಹಿಡಿದು, ಬಂಧಿಸಿ ತೆಗೆದುಕೊಂಡು ಹೋದರು. ಇದನ್ನು ನೋಡಿ ಪೇತ್ರನಿಗೆ ಸಹಿಸಲಾಗಲಿಲ್ಲ, ತನ್ನ ಕತ್ತಿಯನ್ನು ಹಿರಿದು, ಮಹಾ ಯಾಜಕನ ಸೇವಕನ ಕಿವಿಯನ್ನು ಕತ್ತರಿಸಿದನು. ಆದರೆ ಸ್ನೇಹಿತನ ಇಲ್ಲವೇ ವೈರಿಯ ಖಡ್ಗಗಳು ಅಗತ್ಯತೆಯಿಲ್ಲದವುಗಳೂ ನಿಷ್ಪ್ರಯೋಜನವಾವುಗಳೂ ಆಗಿವೆ. ಆತನು ಮನಸ್ಸು ಮಾಡಿದ್ದರೆ ತನ್ನ ವೈರಿಗಳ ವಿರುದ್ಧವಾಗಿ ತನ್ನ ಬಲವನ್ನು ಉಪಯೋಗಿಸ ಬಹುದಿತ್ತು; ಆತನ ಉದ್ದೇಶಗಳಿಗೆ ವಿರುದ್ಧವಾಗಿ ಮತ್ತು ಯೆಹೂದ್ಯರ ತಿರಸ್ಕಾರ ಪ್ರತಿಯಾಗಿ ಆತನ ಪರವಾಗಿ ಆತನ ಸ್ನೇಹಿತರು ಬಲಪ್ರಯೋಗ ಮಾಡುವಂತೆ ಬಿಡಲಿಲ್ಲ. ದೈವಿಕ ಪ್ರೀತಿ ಮತ್ತು ಪೈಶಾಚಿಕ ದ್ವೇಷ. ದೇವರ ಘನವಾದ ಉದ್ದೇಶಗಳು, ಮತ್ತು ಜನರ ಕೀಳು ಮಟ್ಟದ ಉದ್ದೇಶ, ಇವು ಶಿಲುಬೆಯ ಸುತ್ತ ಸಂದರ್ಶಿಸಿದವು, ಮಿಶ್ರವಾಗಿದ್ದವು.

**2. ನ್ಯಾಯವಿಚಾರಣೆಗಳು.**-ರೋಮನ್ನರು ತಾವು ಜಯಿಸಿದ ಎಲ್ಲಾ ಜನರಿಗೆ ಬಿಟ್ಟುಕೊಟ್ಟಂತೆ ಯೆಹೂದ್ಯರಿಗೂ ಬಹಳಷ್ಟು ಸ್ವಾತಂತ್ರ್ಯ ಬಿಟ್ಟುಕೊಟ್ಟಿದ್ದರು. ಅವರು ಶಾಂತಿಯನ್ನು ಕಾಪಾಡಿ ಕೊಂಡು ಹೋಗುವವರೆಗೆ ಮತ್ತು ತೆರಿಗೆಯನ್ನು ಕೊಡುತ್ತಾ

ಹೋಗುವ ವರೆಗೆ ಹೆಚ್ಚಾಗಿ ತಮ್ಮ ಸ್ಥಳಿಕ ವ್ಯವಹಾರಗಳನ್ನು ತಮ್ಮ ಸ್ವಂತ ಮಾರ್ಗದಲ್ಲಿ ನಡಿಸಿಕೊಂಡು ಹೋಗಬಹುದಿತ್ತು, ಆದರೆ ಅವರ ರಾಷ್ಟ್ರೀಯ ಕೌನ್ಸಿಲು ಒಬ್ಬ ಖೈದಿಗೆ *ಮರಣ ದಂಡನೆ* ವಿಧಿಸಿದಾಗ, ಮರಣ ದಂಡನೆಯು ರೋಮನ್ ಕೋರ್ಟಿನ ಅಧಿಕಾರದಲ್ಲಿತ್ತು. ಹೀಗೆ ಯೇಸುವಿನ ಎರಡು ಭಿನ್ನವಾದ ನ್ಯಾಯವಿಚಾರಣೆಗ ಳಿರುತ್ತವೆ: ಯೆಹೂದಿ ಇಲ್ಲವೇ ಧಾರ್ಮಿಕ ವಿಚಾರಣೆ, ಮತ್ತು ರೋಮನ್ ಇಲ್ಲವೇ ನಾಗರಿಕ ವಿಚಾರಣೆ. ಪ್ರತಿಯೊಂದು ನ್ಯಾಯವಿಚಾರಣೆಯಲ್ಲಿ ಮೂರು ಹಂತಗಳಿದ್ದವು.

*a. ಯೆಹೂದಿ ಇಲ್ಲವೇ ಧರ್ಮಸಂಬಂಧವಾದ ನ್ಯಾಯವಿಚಾರಣೆ*.-(1) ಮೊದಲನೆಯ ಹಂತವು ಅನ್ನನ ಮುಂದೆ ಪ್ರಾಥಮಿಕ ವಿಚಾರಣೆ. ಮೊದಲು ಅನ್ನನು ಅನೇಕ ವರ್ಷಗಳ ವರೆಗೆ ಮಹಾ ಯಾಜಕನಾಗಿದ್ದನು, ಮತ್ತು ಇನ್ನೂ *ನಿವೃತ್ತ* ಮಹಾಯಾಜಕನಂತೆ ತಿಳಿಯಲ್ಪಡುತ್ತಿದ್ದನು. ಅವನು ವಯಸ್ಸಾದವನೂ ದೊಡ್ಡ ಪ್ರಭಾವವುಳ್ಳವನೂ ಆಗಿದ್ದನು, ಕೆಲವು ಪ್ರಶ್ನೆಗಳ ನಂತರ, ಅನ್ನನು ಯೇಸುವನ್ನು ಕಾಯಫನ ಬಳಿಗೆ ಕಳುಹಿಸಿದನು; ಆದರೆ ಆತನ ಮೇಲೆ ಕ್ರೂರವಾದ *ಹೊಡೆತ* ಬೀಳುವವರೆಗೆ ಅಲ್ಲ. (2) ಎರಡನೆಯ ಹಂತವು ಕಾಯಫನ ಮುಂದೆ, ಮತ್ತು ಅದು ಹೆಚ್ಚು ಮಹತ್ವದ್ದಾಗಿದೆ. ಕಾಯಫನು ಅನ್ನನ ಅಳಿಯನು, ಹಾಗೂ *ನಿಜವಾದ ಮಹಾ ಯಾಜಕನಾಗಿದ್ದನು.* ಅದರಿಂದ ಸನ್ಹೆದ್ರಿನಿನ ಇಲ್ಲವೇ ಕೌನ್ಸಿಲಿನ ಅಧ್ಯಕ್ಷನಾಗಿದ್ದನು. ಸೂರ್ಯೋದಯಕ್ಕಿಂತ ಮೊದಲಿನ ಯಾವುದೇ ಸನ್ಹೆದ್ರಿನ್ ಕೂಟವು ಕಾನೂನು ಬಾಹಿರವಾದದ್ದಾಗಿದೆ; ಆದರೆ ಜನರು ಕದಡಿಸಲ್ಪಡುವ ಮೊದಲು ಯೇಸುವಿಗೆ ಶಿಕ್ಷೆವಿಧಿಸಲು ನಾಯಕರು ಸಮೀಪ ದಲ್ಲಿದ್ದು ಕೂಟನಡಿಸಿದರು. ಯೋಗ್ಯವಾದ ಅಪರಾಧ ಹೊರಿಸುವುದು ಕಠಿಣವಾ ಗಿತ್ತು, ಹಲವಾರು ಹುರುಳಿಲ್ಲದ ದೂರುಗಳು ತರಲ್ಪಟ್ಟವು, ಸಾಕ್ಷಿಗಳು ಒಂದಕ್ಕೊಂದು ಹೊಂದಿಕೊಳ್ಳಲಿಲ್ಲ. ಯೇಸುವು ಗಂಭೀರವಾದ ಮೌನವಹಿಸಿದ್ದನು. ಆತನು ತನ್ನನ್ನು ತಾನೇ ನಿಂದಿಸಿಕೊಳ್ಳುವಂತೆ ಮಾಡಲು ಕಾಯಫನು ತೀರ್ಮಾನಿಸಿದಾಗ ನ್ಯಾಯ ವಿಚಾರಣೆಯು ಬಿದ್ದುಹೋಗುವ ಗಂಡಾಂತರದಲ್ಲಿತ್ತು. “ಭಗವಂತನ ಕುಮಾರನಾದ ಕ್ರಿಸ್ತನೋ ನೀನು?”[2] ಯೇಸುವು ಮೊದಲು ಮೌನವಾಗಿದ್ದನು, *ಆ* ಪ್ರಶ್ನೆಗೆ ಆತನು ಮೌನವಾಗಿರದಾದನು. “ನಾನೇ”[3] ಎಂದು ಉತ್ತರಕೊಟ್ಟನು. “ದೇವಧೂಷಣೆ, ಇವನು ಮರಣ ದಂಡನೆ ಹೊಂದತಕ್ಕವನು”[4] ಎಂದು ಕಾಯಫನು ಕೂಗಿದನು, ವಿರೋಧಿಯಾದ ನ್ಯಾಯಾಧೀಶರು ಪ್ರತಿಧ್ವನಿಸಿದರು. ಯೇಸುವು ಬಂಧಿಸಲ್ಪಟ್ಟದ್ದು ಮಧ್ಯ ರಾತ್ರಿಯ ನಂತರ ಆಗಿರಬಹುದು. ಸೂರ್ಯೋದಯವಾಗಲಿಕ್ಕೆ ಇನ್ನೂ ಸಮಯದ ಕೊರತೆ ಇತ್ತು ಮತ್ತು ಸನ್ಹೆದ್ರಿನ್ ಸಭೆಯ ಕೂಟ ಕೊಡುವ ಮಧ್ಯದ ಸಮಯದಲ್ಲಿ ವಿರೋಧಿಸದ ಖೈದಿಯ ಮೇಲೆ ಕ್ರೂರವಾದ ಅಪಹಾಸ್ಯವು ನಡೆಯಿತು. (3) ಮೂರನೆಯ ಹಂತವು ಈಗಾಗಲೇ ಮಾಡಿದ ತೀರ್ಮಾನವನ್ನು ಸಮ್ಮತಿಸುವುದಕ್ಕೆ ಪೂರ್ಣ ಕೌನ್ಸಿಲಿನ ಕೂಟವಾಗಿತ್ತು.

ಮೊದಲಿನ ಹಂತಗಳ ಸಮಯದಲ್ಲಿ ಪೇತ್ರನ ಬಿದ್ದುಹೋಗುವಿಕೆಯು ಸಂಭವಿಸಿತು. ಯೋಹಾನನೊಂದಿಗೆ ಅವನು ಯೇಸುವಿನ ಹತ್ತಿರಕ್ಕೆ ಹಿಂಬಾಲಿಸಿ ಹೋಗಿದ್ದನು. ಮತ್ತು ನಡೆಯುತ್ತಿದ್ದುದನ್ನು ಗಮನಿಸುತ್ತಿದ್ದನು. ಅದು ಗಂಡಾಂತರದ ಸ್ಥಳವಾಗಿತ್ತು; ಒಬ್ಬರು ಮತ್ತೊಬ್ಬರು ಅವನ ಕಡೆಗೆ ಆತನು ಗಲಿಲಾಯದವನೆಂದು ತಿರಸ್ಕಾರದಿಂದ ತೋರಿಸಿ ದಾಗ, ಅವನು ಭಯದಿಂದ ತುಂಬಿದವನಾಗಿ ತನ್ನ ಕರ್ತನನ್ನು ಮೂರು ಸಲ ಅಲ್ಲಗಳೆದನು. ಅಲ್ಲಗಳೆಯುವಿಕೆಗಳಿಗೆ ಆಣೆ ಇಡುವುದನ್ನೂ ಕೂಡಿಸಿದನು. ಅಯ್ಯೋ ಪೇತ್ರನೇ! ಅವನು ನಿರಾಶೆಯಿಂದ *ತಪ್ಪಿಹೋದವನಾಗಿದ್ದನು.* ಕೋಳಿ ಕೂಗಿದ್ದು, ಯೇಸು ಮುಂಚಿತವಾಗಿ ಹೇಳಿದ್ದನ್ನೂ

ಅವನ ಸ್ವಂತ ಗರ್ವದ ಹೊಗಳಿಕೊಳ್ಳುವಿಕೆಯನ್ನೂ ಜ್ಞಾಪಕಕ್ಕೆ ತಂದಿತು. ದುಃಖದಿಂದ ತುಂಬಿಕೊಂಡನು. ಕಾಯಫನ ಅರಮನೆಯಿಂದ ದಾಟಿಹೋಗುತ್ತಿದ್ದ ಯೇಸುವಿನ ಮೌನ ದೃಷ್ಟಿಸುವಿಕೆಯು ಅವನ ಮನಸ್ಸಾಕ್ಷಿಯನ್ನು ಎಚ್ಚರಿಸಿತು; "ಹೊರಗೆ ಹೋಗಿ ಬಹು ವ್ಯಥೆಪಟ್ಟು ಅತ್ತನು."[5]

ಇನ್ನೊಂದು ಕಡೆಯಲ್ಲಿ ಇನ್ನೂ ಹೆಚ್ಚು ದುಃಖಕರವಾದ ಮತ್ತು ಹೆಚ್ಚು ಭಯಂಕರವಾದ ದೃಶ್ಯವಿತ್ತು. ಯೂದನು ಸಹ ವಿಚಾರಣೆಯ ಕಡೆಗೆ ತನ್ನ ಗಮನ ಹರಿಸಿದ್ದನು. ಯೇಸುವು ತನ್ನ ಬಂಧನಗಳನ್ನು ಮುರಿದು ಹಾಕಿ ತನ್ನ ಮಹಿಮೆಯನ್ನು ಪ್ರದರ್ಶಿಸುವನೆಂದು ನಿರೀಕ್ಷಿಸಿದ್ದನು. ತನ್ನ ಒಡೆಯನ ಮೇಲೆ ಯಾವ ಕೇಡೂ ಬರುವುದಿಲ್ಲ, ತಾನು ಮೂವತ್ತು ಬೆಳ್ಳಿ ನಾಣ್ಯಗಳೊಂದಿಗೆ ಐಶ್ವರ್ಯವಂತನಾಗುವೆನೆಂದು ಭಾವಿಸಿದ್ದಿರಬೇಕು. ಆದರೆ ಮೂರು ಹಂತಗಳ ಯೆಹೂದಿ ವಿಚಾರಣೆಯು ಮುಕ್ತಾಯಗೊಂಡಿತು. ಯೇಸುವಿಗೆ ಮರಣದಂಡನೆ ವಿಧಿಸಲ್ಪಟ್ಟಿತು. ಪಿಲಾತನ ತೀರ್ಪು ಮಾತ್ರ ಅಗತ್ಯವಾಗಿತ್ತು. ಯೂದನ ಮೇಲೆ ನಿರಾಶೆಯ ದುಃಖವು ತುಂಬಿ ಬಂದಿತು. ಆ ಮೂವತ್ತು ಬೆಳ್ಳಿ ನಾಣ್ಯಗಳು ಅವನ ಪ್ರಾಣದಲ್ಲಿ ಉರಿಯುತ್ತಿದ್ದವು, ಅವನು ಮಹಾಯಾಜಕರ ಮತ್ತು ಹಿರಿಯರ ಮುಂದೆ ಬಂದು ಆ ಹಣವನ್ನು ಚೆಲ್ಲಿ: "ತಪ್ಪಿಲ್ಲದವನನ್ನು ಮರಣಕ್ಕೆ ಒಪ್ಪಿಸಿಕೊಟ್ಟು ಪಾಪ ಮಾಡಿದೆನು"[6] ಎಂದು ಹೇಳಿದನು. "ಅದು ನಮಗೇನು, ನೀನೇ ನೋಡಿಕೋ" ಎಂಬುದು ಅವರ ಹೃದಯಹೀನ ಉತ್ತರವಾಗಿತ್ತು. ದ್ರೋಹ ಮಾಡಿದವನು ಯಾವಾಗಲೂ ಅವನನ್ನು ಉಪಯೋಗಿಸಿದವರಿಂದ ತಿರಸ್ಕಾರದಿಂದ ನೋಡಲ್ಪಡುತ್ತಾನೆ. ಅವನು ಹೊರಗೆ ಹೋಗಿ ನೇಣು ಹಾಕಿಕೊಂಡನು (ಹೋಲಿಸು ಮತ್ತಾಯ 27:5; ಅಪೊಸ್ತಲರ ಕೃತ್ಯಗಳು 1:18, 19). ಆಗಲಾದರೂ ಅವನು ಹಿಂದಿರುಗಿ ಹೋಗಿ, ಯೇಸುವಿನ ಪಾದಗಳಿಗೆ ಅಡ್ಡಬಿದ್ದು, ಆತನಿಂದ ಕ್ಷಮಾಪಣೆಯ ಆಶೀರ್ವಾದವನ್ನು ಯಾಕೆ ಹೊಂದಲಿಲ್ಲ? ಪಶ್ಚಾತ್ತಾಪವು ನಿಜವಾದ ಮಾನಸಾಂತರವಾಗಿರುವುದಿಲ್ಲ. ಯೂದನು ಒಂದಕ್ಕಾಗಿ ನಿಲ್ಲುತ್ತಾನೆ; ಪೇತ್ರನು ಇನ್ನೊಂದಕ್ಕಾಗಿ ನಿಲ್ಲುತ್ತಾನೆ.

*b. ರೋಮನ್ ಇಲ್ಲವೇ ನಾಗರಿಕ ನ್ಯಾಯವಿಚಾರಣೆ.*-ಇಲ್ಲಿಯೂ ಸಹ ಮೂರು ಹಂತಗಳಿದ್ದವು. (1) ಪಿಲಾತನ ಮುಂದೆ. ಪಿಲಾತನ ಮೊದಲನೆಯ ಪ್ರಶ್ನೆಯು: "ಯಾವ ಆಪಾದನೆ?" ಎಂಬುದು. ಯೆಹೂದ್ಯರು ದೇವದೂಷಣೆಯ ಅಪರಾಧ ಹೊರಿಸಿದ್ದರು, ಅದರ ಮೇಲೆ ಅವನನ್ನು ಖಂಡಿ*ಸಿದ್ದರು.* ಇದು ರೋಮನ್ ಕೋರ್ಟಿನ ಮುಂದೆ ನಿಲ್ಲುತ್ತಿರಲಿಲ್ಲ. ಸ್ಪಷ್ಟವಾಗಿರದ ಒಂದು ಕೆಟ್ಟ ಕಾರ್ಯದ ಮೇಲೆ ಪಿಲಾತನಿಂದ ದಂಡನೆಯನ್ನು ಪಡೆದುಕೊಳ್ಳಲು ಪ್ರಯತ್ನಿಸಿದರು; ಆದರೆ ನ್ಯಾಯದ ಬಗ್ಗೆ ರೋಮನ್ ಅರ್ಥದಲ್ಲಿ ಪಿಲಾತನು ಸ್ಪಷ್ಟವಾದ ದೂರುಕೊಡುವಂತೆ ಒತ್ತಾಯಿಸಿದನು. "ಇವನು ತಾನೇ ಕ್ರಿಸ್ತನೆಂಬ ಒಬ್ಬ ಅರಸನಾಗಿದ್ದೇನೆಂದು ಹೇಳುತ್ತಾ ಕೈಸರನಿಗೆ ತೆರಿಗೆ ಕೊಡಬಾರದೆಂದು ಬೋಧಿಸುತ್ತಾನೆ."[7] ಮೊದಲನೆಯದು ಒಂದು ಸುಳ್ಳಾಗಿತ್ತು, ಮತ್ತು ಯಾವುದೇ ರೀತಿಯಲ್ಲಿ ಯೇಸುವು ತನ್ನನ್ನು ಅರಸುತನಕ್ಕೆ ಪೋಷಿಸಿಕೊಳ್ಳಲಿಲ್ಲ ಎಂಬುದರ ಬಗ್ಗೆ ಪಿಲಾತನು ತೃಪ್ತಿ ಪಡೆದುಕೊಂಡನು ಹಾಗೂ ಆತನು ನಿರಪರಾಧಿಯಾಗಿದ್ದಾನೆಂದು ಹೇಳಿದನು. ಅವರು ಸುಮ್ಮನೇ ಬಿಟ್ಟು ಹೋಗುವವರಾಗಿರಲಿಲ್ಲ. ಆತನು ಗಲಿಲಾಯದಿಂದ ಯೆರೂಸಲೇಮಿನ ವರೆಗೆ ಎಲ್ಲಾ ರೀತಿಯಲ್ಲಿ ಜನರಲ್ಲಿ ದಂಗೆ ಎಬ್ಬಿಸುತ್ತಿದ್ದಾನೆಂಬ ನಾಲ್ಕನೆಯ ದೂರನ್ನು ಹೇಳಿದರು. ಪಿಲಾತನು ಪೇಚಿನಲ್ಲಿ ಸಿಕ್ಕಿಕೊಂಡನು. ನಿರಪರಾಧಿ ಮನುಷ್ಯನನ್ನು ದಂಡಿಸಲಿಕ್ಕೆ ಅವನು ಸಿದ್ಧನಾಗಿರಲಿಲ್ಲ; ಯೆಹೂದ್ಯರ ಮನನೋಯಿಸಲೂ ಬಯಸಲಿಲ್ಲ. ಆದರೆ ಅವನು ಗಲಿಲಾಯ ಎಂಬ ಪದವನ್ನು ಹಿಡಿದುಕೊಂಡನು. ಅದು ಹೆರೋದನ ಪ್ರಾಂತ್ಯವಾಗಿತ್ತು; ಹೆರೋದನು ಪಟ್ಟಣದಲ್ಲಿದ್ದನು; ಇಬ್ಬರು ರಾಜ್ಯಪಾಲರು

ವೈರಿಗಳಾಗಿದ್ದರು; ಹೆರೋದನೊಂದಿಗೆ ಸ್ನೇಹ ಬೆಳಿಸಲು ಮತ್ತು ಒಪ್ಪಿಕೊಳ್ಳಲಾಗದ ಹಾಗೂ ಗಂಡಾಂತರ ಕಾರಿಯಾದ ಯೇಸುವಿನ ವಿಷಯದಿಂದ ತಪ್ಪಿಸಿಕೊಳ್ಳಲು ಇದು ಪಿಲಾತನಿಗೆ ಆಕಸ್ಮಿಕವಾದ ಅವಕಾಶವಾಗಿತ್ತು. ಆದುದರಿಂದ ಪಿಲಾತನು ಯೇಸುವನ್ನು ಹೆರೋದನ ಬಳಿಗೆ ಕಳುಹಿಸಿಕೊಟ್ಟನು. (2) ಹೆರೋದನ ಮುಂದೆ. ಯೇಸುವಿನಿಂದ ಕೆಲವೊಂದು ಅದ್ಭುತಕಾರ್ಯವನ್ನು ನೋಡುವುದಕ್ಕಾಗಿ ಹೆರೋದನು ಯೇಸುವನ್ನು ನೋಡಲು ಕುತೂಹಲ ಭರಿತನಾಗಿದ್ದನು. ಆದರೆ ಯೇಸುವು, ಹಂದಿಗಳ ಮುಂದೆ ಮುತ್ತುಗಳನ್ನು ಚೆಲ್ಲಬಾರದೆಂಬ ತನ್ನ ತತ್ವದೊಂದಿಗೆ, ಹೆರೋದನ ಯಾವ ಪ್ರಶ್ನೆಗಳಿಗೂ ಒಂದು ಮಾತನ್ನೂ ಹೇಳಲಿಲ್ಲ. ಇಲ್ಲಿ ಎರಡನೆಯ ಅಪಹಾಸ್ಯವು ಮಾಡಲ್ಪಟ್ಟಿತು. ಹೆರೋದ ಮತ್ತು ಅವನ ಕ್ರೂರ ಸಿಪಾಯಿಗಳು ಯೇಸುವಿಗೆ ಹಳೇ ರಾಜಬಟ್ಟೆಯನ್ನು ಹಾಕಿ ಆತನನ್ನು ಪಿಲಾತನ ಬಳಿಗೆ ಹಿಂದಿರುಗಿ ಕಳುಹಿಸಿದರು. (3) ಪುನಃ ಪಿಲಾತನ ಮುಂದೆ ಈ ಸಮಯದಲ್ಲಿ ವಾರ್ಷಿಕ ಪಸ್ಕ ಹಬ್ಬದ ಸಮಯದಲ್ಲಿ ಒಬ್ಬ ಖೈದಿಯನ್ನು ಬಿಡುಗಡೆ ಗೊಳಿಸುವ ರೂಢಿಯಂತೆ ಒಬ್ಬ ಕೈದಿಯನ್ನು ಬಿಡುಗಡೆ ಮಾಡಬೇಕೆಂದು ಜನರು ಕೇಳಲು ಪ್ರಾರಂಭಿಸಿದರು. ಪಿಲಾತನು ಕೂಡಲೇ ಯೇಸುವನ್ನು ಸೂಚಿಸಿದನು, ಆದರೆ ಯಾಜಕರು ಜನರೊಂದಿಗೆ ಕಾರ್ಯನಿರತರಾಗಿದ್ದರು. ಜಯಶಾಲಿಯಂತೆ ಪಟ್ಟಣ ಪ್ರವೇಶಿಸಿದ ಹಾಗೂ ಸನ್ಹೆಡ್ರಿನ್ ಸಭೆಯಿಂದ ದಂಡಿಸಲ್ಪಟ್ಟ ಯೇಸು ಮತ್ತು ಇನ್ನೊಬ್ಬನು, ಇಬ್ಬರು ವ್ಯಕ್ತಿಗಳು ಪಿಲಾತನ ತೀರ್ಪಿಗಾಗಿ ಕಾದಿದ್ದರು. "ಇವನನ್ನು ಬೇಡ, ಬರಬ್ಬನನ್ನು ಬಿಟ್ಟು ಕೊಡಬೇಕು,"[8] ಪಿಲಾತನು ಕೆಲಸಮಯ ಪಿಲಾತನು ಜನ ಸಮೂಹದೊಂದಿಗೆ ಹಾಗೂ ತನ್ನ ಸ್ವಂತ ಮನಸ್ಸಾಕ್ಷಿಯೊಂದಿಗೆ ಹೋರಾಡಿದನು. ಆಮೇಲೆ ಒಪ್ಪಿಕೊಂಡು, ಯೇಸುವನ್ನು ಶಿಲುಬೆಗೆ ಹಾಕುವುದಕ್ಕೆ ಒಪ್ಪಿಸಿಕೊಟ್ಟನು. ಈ ಮಧ್ಯದಲ್ಲಿ ಪಿಲಾತನ ಸಿಪಾಯಿಗಳು ಅಪಹಾಸ್ಯಮಾಡಿದರು. ಕೆಂಪು ಒಲ್ಲಿಯನ್ನು ಆತನಿಗೆ ಹೊದಿಸಿ ಮುಳ್ಳಿನ ಕಿರೀಟವನ್ನು ಆತನ ತಲೆಯ ಮೇಲಿಟ್ಟು ಕೈಗೆ ಕೋಲನ್ನು ಕೊಟ್ಟರು.

ಹೀಗೆ ಆರು ರೀತಿಯ ನ್ಯಾಯವಿಚಾರಣೆ ಮುಗಿಯಿತು. ಹೀಗೆ ಕ್ರೂರತೆ, ಕಪಟತೆ, ಸ್ವಾರ್ಥನೀತಿ, ಮತ್ತು ಕ್ರೂರ ದುಷ್ಟತ್ವಗಳು ಯೇಸುವಿನ ಅತ್ಯುನ್ನತ ಮಾನವತ್ವಕ್ಕೆ ವಿರುದ್ಧವಾಗಿ ನಿಂತುಕೊಳ್ಳುತ್ತವೆ. ಅಲ್ಲಿಯೂ ಸಹ ಆಗ ಅಪಹಾಸ್ಯ ಅರಸುತನದಲ್ಲಿ ಜನಸಮೂಹದ ಅಪಹಾಸ್ಯ ನಿಂದನೆಗಳನ್ನು ಎದುರಿಸುತ್ತ, ಆತನು ಹೆರೋದನ ಸಿಂಹಾಸನದ ಮೇಲೆ ಎಂದಾದರೂ ಕುಳಿತುಕೊಂಡ ಅರಸನಿಗಿಂತ ಇಲ್ಲವೇ ಒಬ್ಬ ಕೈಸರನು ಮುಕುಟ ಧರಿಸಿದ್ದಕ್ಕಿಂತ ಒಂದು ಸಾವಿರ ಸಲಕ್ಕೆ ಹೆಚ್ಚಾಗಿ ಅರಸನಾಗಿದ್ದನು.

**3. ಶಿಲುಬೆಗೆ ಹಾಕಲ್ಪಟ್ಟದ್ದು.**-*a. ಸಮಯ ಮತ್ತು ಸ್ಥಳ.*-ಶಿಲುಬೆಗೆ ಹಾಕಲು ಅಪ್ಪಣೆ ಕೊಡಲ್ಪಟ್ಟಾಗ ಪ್ರಾತಃಕಾಲ ಸುಮಾರು ಒಂಭತ್ತು ಘಂಟೆಯಾಗಿತ್ತು, ಯೇಸುವು ಪಟ್ಟಣದ ಹೊರಗೆ (ಇಬ್ರಿಯ 13:12), ಹಿಬ್ರುವಿನಲ್ಲಿ ಗೊಲ್ಗೊಥಾ; ಗ್ರೀಕಿನಲ್ಲಿ ಕ್ರೆನಿಯೊನ; ಲಾಟಿನ್ನಿನಲ್ಲಿ ಕಾಲ್ವೆರಿಯಮ್ (ಕಲ್ವಾರಿ) - ಎಂದು ಕರೆಯಲ್ಪಟ್ಟ ಸ್ಥಳದಲ್ಲಿ ಶ್ರಮೆ ಹೊಂದಿದನು. ಈ ಎಲ್ಲಾ ಪದಗಳ ಅರ್ಥ ತಲೆಬುರುಡೆ ಎಂದಾಗುತ್ತದೆ. ಇದು ಪಟ್ಟಣದ ಉತ್ತರ ಪಶ್ಚಿಮದಲ್ಲಿ ತಲೆಬುರುಡೆ ಆಕಾರದ ದಿನ್ನೆಗೆ ಬಹುಶಃ ಸಂಬಂಧಿಸಿತ್ತು.

*b. ಮಾರ್ಗದಲ್ಲಿ.*-ಯೇಸುವು ತನ್ನ ಶಿಲುಬೆಯನ್ನು ತಾನೇ ಹತ್ತುಕೊಂಡು ನಡೆದನು; ಆದರೆ ಗೊಲ್ಗೊಥವನ್ನು ತಲುಪುವ ಮೊದಲು, ಕುರೇನ್ಯದ ಒಬ್ಬ ಯುವಕನನ್ನು ಹಿಡಿದು ಸಿಪಾಯಿಗಳು ಶಿಲುಬೆಯನ್ನು ಅವನ ಮೇಲೆ ಹೊರಿಸದರು; ಬಹುಶಃ ಅದು ಯೇಸುವಿನ ಶಕ್ತಿಗೆ ಹೊರಲಾರದಷ್ಟು ಭಾರವಾದದ್ದಾಗಿರಬೇಕು; ರಾತ್ರಿಯಲ್ಲಿ ನಿದ್ರೆಯಿಲ್ಲದೇ ಪ್ರಾತಃಕಾಲದಲ್ಲಿಯ ಶ್ರಮೆಗಳಿಂದ ಯೇಸುವು ದಣಿದು ಹೋಗಿದ್ದಿರ ಬಹುದು. ಕತ್ತಲೆಯ

ತಾಸುಗಳಲ್ಲಿಯೂ ಸಹ ಕೆಲವರು ಆತನಿಗಾಗಿ ಗೋಳಾಡುತ್ತಿದ್ದದು ಕಂಡು ಬಂದಿತು. ಅವಮಾನದಿಂದ ಇಷ್ಟರ ವರೆಗೆ ಮೌನತೆಯಲ್ಲಿದ್ದ ತುಟಿಗಳು; ಈಗ ತನಗಾಗಿ ಅಲ್ಲ ಆದರೆ ಯೆರೂಸಲೇಮಿನ ಮೇಲೆ ಬೇಗನೇ ಬರಲಿಕ್ಕಿದ್ದ ನಾಶನದಲ್ಲಿರುವವರ ಬಗ್ಗೆ, ದಯೆಯಿಂದ ನುಡಿದವು.

*c. ಶಿಲುಬೆಯ ಬಳಿಯಲ್ಲಿ.*-ಆತನೊಂದಿಗೆ ಇಬ್ಬರು ಕಳ್ಳರು ಶಿಲುಬೆಗೆ ಹಾಕಲ್ಪಟ್ಟರು. ಶಿಲುಬೆಗೆ ಹಾಕುವುದು ಕಡಮೆ ತರಗತಿಯ ಅಪರಾಧಿಗಳನ್ನು ಮರಣ ದಂಡನೆಗೆ ವಿಧಿಸುವುದು ರೋಮನ್‌ರ ಪದ್ಧತಿಯಾಗಿತ್ತು, ಯೆರೂಸಲೇಮಿನ ಮಹಿಳೆಯರು ದಯಾಕಾರ್ಯವಾಗಿ ಮತ್ತು ಬರುವ ಪಾನೀಯವನ್ನು ಅಂಥ ಸಂದರ್ಭಗಳಲ್ಲಿ ಒದಗಿಸುತ್ತಿದ್ದರು, ಅಂಥ ಪಾನವು ಈಗ ಕೊಡಲ್ಪಟ್ಟಿತು; ಆದರೆ ಯೇಸುವು ತನ್ನ ನೋವು ಗಳನ್ನು ಮರೆಯಲು ಬಯಸದೇ ಅದನ್ನು ನಿರಾಕರಿಸಿದನು.

*d. ಶಿಲುಬೆಯಿಂದ ಏಳು ಮಾತುಗಳು.*-ಶಿಲುಬೆಯಿಂದ ಯೇಸುವು ಹೇಳಿದ ಏಳು ಮಾತುಗಳು ದಾಖಲಿಸಲ್ಪಟ್ಟಿವೆ: (1) ಅವುಗಳಲ್ಲಿ ಮೊದಲನೆಯದು ಬಹುಶಃ ಈ ಕ್ಷಣದಲ್ಲಿ ಹೇಳಲ್ಪಟ್ಟಿತು. ದೇಹಗಳು ಮೊದಲು ಶಿಲುಬೆಗೆ ನೇತುಹಾಕಲ್ಪಡುತ್ತಿದ್ದವು, ಆಗ ಶಿಲುಬೆಯು ತನ್ನ ತಗ್ಗಿನಲ್ಲಿ ಬಲವಾಗಿ ನಿಲ್ಲಿಸಲ್ಪಡುತ್ತಿತ್ತು. "ತಂದೆಯೇ, ಅವರನ್ನು ಕ್ಷಮಿಸು; ತಾವು ಏನು ಮಾಡುತ್ತೇವೆಂಬುದನ್ನು ಅರಿಯರು"[9]; ಸ್ವಲ್ಪ ಸಮಯದಲ್ಲಿ ಯೇಸುವಿನ ಬಟ್ಟೆಗಳಿಗಾಗಿ ಚೀಟು ಹಾಕಲು ಕುಳಿತುಕೊಂಡ ಒರಟರಾದ ಸಿಪಾಯಿಗಳಿಗೆ ಇದು ಸಂಬಂಧಿಸಿದೆ, ಅಪರಾಧಗಳ ಮೇಲೆ ಹಾಕಲು ಪಿಲಾತನು ಹಲವಾರು ದೂರುಗಳನ್ನು ಸಿದ್ಧಪಡಿಸಿದ್ದನು: "ನಜರೇತಿನ ಯೇಸು, ಯೆಹೂದ್ಯರ ಅರಸನು"[10] ಎಂಬುದು ಯೇಸುವಿಗೆ ಹಿಬ್ರೂ, ಗ್ರೀಕ್ ಮತ್ತು ಲ್ಯಾಟಿನ್ ಬಾಷೆಗಳಲ್ಲಿ ಬರೆದಿತ್ತು, ಇದು ಪಿಲಾತನ ಅರ್ಥವೂ ಯೆಹೂದ್ಯರಿಗೆ ಚುಚ್ಚು ಮಾತೂ ಆಗಿತ್ತು, ಅವರು ವಿರೋಧಿಸಿದರು, ಆದರೆ ಏನೂ ಆಗಲಿಲ್ಲ. (2) ಯೇಸುವಿನ ತಾಯಿ ಮತ್ತು ಬೇರೆ ಇಬ್ಬರು ಮರಿಯಳರು ಯೋಹಾನನೊಂದಿಗೆ ಶಿಲುಬೆಯ ಬಳಿಯಲ್ಲಿ ನಿಂತುಕೊಂಡಿದ್ದರು, ತನ್ನ ತಾಯಿಗೆ ಮತ್ತು ಯೋಹಾನನಿಗೆ ತನ್ನ ಎರಡನೆಯ ಮಾತನ್ನು ಹೇಳಿದನು: "ಇಗೋ ನಿನ್ನ ಮಗನು; ಇಗೋ, ನಿನ್ನ ತಾಯಿ"[11]; ತನಗಿಂತ ಹೆಚ್ಚಾಗಿ ಇತರರ ಕಡೆಗೆ ತನ್ನ ಗಮನವಿರುವುದನ್ನು ತೋರಿಸಿದನು. (3) ಮತ್ತು ಈಗ ಬಲಹೀನತೆಯ ಮೇಲೆ ತನ್ನಲ್ಲಿ ಮುಚ್ಚಿಟ್ಟು ಕೊಂಡಿದ್ದ ವಿರೋಧವನ್ನು ಅಸಹ್ಯಕರವಾದ ರೀತಿಯಲ್ಲಿ ಪ್ರದರ್ಶಿಸಲು ಪ್ರಾರಂಭಿಸುತ್ತದೆ. ಪ್ರಧಾನ ಯಾಜಕರು, ಶಾಸ್ತ್ರಿಗಳು, ಅಧಿಕಾರಿಗಳು, ದೇಶದ ಅಧಿಕಾರಿಗಳು ಕೂಡಿಬಂದು ಅಪಹಾಸ್ಯದಲ್ಲಿ ನಿಂದನೆಯಲ್ಲಿ ತೊಡಗುತ್ತಾರೆ. "ಆತನು ಬೇರೆಯವರನ್ನು ರಕ್ಷಿಸಿದನು, ತನ್ನನ್ನು ರಕ್ಷಿಸಿಕೊಳ್ಳಲಾರನು"[12]; ಅವರು ಕನಸು ಕಂಡದ್ದಕ್ಕಿಂತಲೂ ಹೆಚ್ಚು ಆಳವಾದ ಸತ್ಯವಿದಾಗಿತ್ತು; ಆತನು ಇತರರನ್ನು ರಕ್ಷಿಸಬೇಕಾಗಿದ್ದರೆ ತನ್ನನ್ನು ಹೇಗೆ ರಕ್ಷಿಸಿಕೊಳ್ಳ ಬಲ್ಲನು? ಶಿಲುಬೆಯ ಮೇಲಿದ್ದ ಕಳ್ಳರು, ನಿರ್ಭಾಗ್ಯರು ಸಹ ಮೊದಲು ಇಬ್ಬರೂ ಅಪಹಾಸ ಮಾಡುವದರಲ್ಲಿ ಭಾಗಿಗಳಾದರು. ಒಬ್ಬನು ನಿರಪರಾಧಿಯಾಗಿದ್ದು ಶ್ರಮೆಪಡುತ್ತಿದ್ದಾತನ ಕಡೆಗೆ ದಯೆಯಿಂದ ಮತ್ತು ಮಾನಸಾಂತರದಿಂದ ತುಂಬಿದವನಾಗಿ, "ನೀನು ನಿನ್ನ ರಾಜ್ಯವನ್ನು ಪಡೆದವನಾಗಿ ಬರುವಾಗ ನನ್ನನ್ನು ನೆನಸಿಕೋ"[13] ಎಂದು ಮಧ್ಯದ ಶಿಲುಬೆಯ ಮೇಲಿದ್ದಾತನ ಕಡೆಗೆ ತಿರುಗಿಕೊಂಡು ಪ್ರಾರ್ಥಿಸಿದನು. ತನ್ನ ಹೆಸರಿಗೆ ತಕ್ಕಂತೆ, ಮತ್ತು ಕಡೆಯವರ ವರೆಗೆ ಇರುವ ತನ್ನ ನಿಯೋಗಕ್ಕೆ ತಕ್ಕಂತೆ ಯೇಸುವು ಶಿಲುಬೆಯಿಂದ ಮೂರನೆಯ ಮಾತನ್ನು ಹೇಳಿದನು, "ಈ ಹೊತ್ತೇ ನನ್ನ ಸಂಗಡ ಪರದೈಸಿನಲ್ಲಿರುವಿ."[14] (4) ಆಗ, ಹನ್ನೆರಡರಿಂದ ಮೂರರವರೆಗೆ, ಮೂರು ತಾಸುಗಳ ಕತ್ತಲೆ ಹಾಗೂ ಮೌನತೆ ಆವರಿಸಿತು. ಅದು ಸಾಯಂಕಾಲದ ಯಜ್ಞಾರ್ಪಣೆಯ

ಸಮಯವಾಗಿತ್ತು. ಆಗ ಕತ್ತಲೆಯೊಳಗಿಂದ, ಶಿಲುಬೆಯಿಂದ, ಪರಲೋಕಕ್ಕೆ ತಾಳ್ಮೆಯ ತುಟಿಗಳಿಂದ ಮೊದಲನೆಯ ಮತ್ತು ಕೊನೆಯ ದೂರು ರಹಸ್ಯವಾದ ಮಾತುಗಳು ಮೇಲಕ್ಕೇರಿ ಹೋಗುತ್ತವೆ, "ನನ್ನ ದೇವರೇ, ನನ್ನ ದೇವರೇ ಯಾಕೆ ನನ್ನನ್ನು ಕೈಬಿಟ್ಟಿದ್ದೀ"[15] ಬೇಗನೇ ಇತರ ಮಾತುಗಳು ಹೇಳಲ್ಪಡುತ್ತವೆ: (5) "ನನಗೆ ನೀರಡಿಕೆ ಆಗಿದೆ."[16] ಶಾರೀರಿಕ ನೋವಿನ ಮೊದಲನೆಯ ಮತ್ತು ಕೊನೆಯ ವ್ಯಕ್ತಪಡಿಸುವಿಕೆ, ಕಠಿಣವಾದ ಹೃದಯಗಳಿಗೆ ಭಯಭಕ್ತಿಯು ಮೃದುತ್ವವನ್ನು ತಂದಿತ್ತು, ಮತ್ತು ಯೇಸುವು ತಂಪಾಗಿಸುವ ಹುಳಿ ರಸವನ್ನು ಸ್ವೀಕರಿಸಿದನು, ಮತ್ತೊಮ್ಮೆ ಆತನು ಮಾತನಾಡಿದನು: (6) "ತೀರಿತು"[17]; ತೀರಿತು, ಕೇವಲ ಅಂತ್ಯವಾಗಲಿಲ್ಲ, ಭೂಲೋಕದ ಮೇಲೆ ಜೀವಿಸಿದ ಶ್ರೇಷ್ಠ ಜೀವಿತವು ಮುಗಿಯಲಿಲ್ಲ; ತೀರಿತು, ಮಾನವ ವಿಮೋಚನೆಯ ಕಾರ್ಯವು ತೀರಿತು; ತೀರಿತು, ಪಿತೃಗಳು ಮತ್ತು ಪ್ರವಾದಿಗಳು ಕನಸು ಕಂಡದ್ದಕ್ಕಿಂತ ಎಷ್ಟೋ ಶ್ರೇಷ್ಠವಾದ ರೀತಿಯಲ್ಲಿ, ಹಳೇ ಒಡಂಬಡಿಕೆಯ ಪದ್ಧತಿಗಳು, ಸಂಕೇತಗಳು ಮತ್ತು ಪ್ರವಾದನೆಗಳು ನೆರವೇರಿಸಲ್ಪಟ್ಟವು. (7) ಆಗ, ತನ್ನ ತಲೆ ಬಾಗಿಸಿ, ಶಿಲುಬೆಯಿಂದ ಏಳನೆಯ ಮತ್ತು ಕೊನೆಯ ಮಾತನ್ನು ಹೇಳಿ ತನ್ನ ಆತ್ಮವನ್ನು ಒಪ್ಪಿಸಿಕೊಟ್ಟನು: "ತಂದೆಯೇ, ನನ್ನ ಆತ್ಮವನ್ನು ನಿನ್ನ ಕೈಗೆ ಒಪ್ಪಿಸಿಕೊಡುತ್ತೇನೆ."[18]

*e. ಹಳೇ ಒಡಂಬಡಿಕೆಯ ಅಂತ್ಯ.*-ಆತನ ಮರಣದ ಕೂಗಿನ ಸಮಯದಲ್ಲಿ ಭೂಮಿಯು ಭೂಕಂಪದ ಅನುಭವ ಹೊಂದಿತು. ದೇವಾಲಯದ ತೆರೆಯು ಮೇಲಿನಿಂದ ಕೆಳಗಿನ ವರೆಗೆ ಹರಿದು ಹೋಯಿತು; ಯಾಕಂದರೆ ಯೇಸುವಿನ ಶಿಲುಬೆಯು ತನ್ನ ವಿಧಿಗಳು ಮತ್ತು ಛಾಯೆಗಳೊಂದಿಗೆ ಹಳೇ ಒಡಂಬಡಿಕೆ ರದ್ದುಪಡಿಸುವಿಕೆಯನ್ನು ಯೇಸುವಿನ ಶಿಲುಬೆಯು ಗುರುತಿಸಿತು (ಕೊಲೊಸ್ಸೆ 2:14). ಜನರು ಭಯದಿಂದ ತುಂಬಿ ಕೊಂಡರು. "ನಿಜವಾಗಿ ಈತನು ದೇವರ ಕುಮಾರನಾಗಿದ್ದನು"[19] ಎಂದು ರೋಮನ್ ಶತಾಧಿಪತಿಯು ಹೇಳಲು ಒತ್ತಾಯಿಸಲ್ಪಟ್ಟನು.

**4. ಹೂಣಿಡುವಿಕೆ.**-ಶಿಲುಬೆಗೆ ಹಾಕಿದ ದಿನದ ಮರು ದಿನವು ಉನ್ನತ ಸಬ್ಬತ್ತಾಗಿತ್ತು. ಯೆಹೂದ್ಯರು ಕೊಲೆಮಾಡಬಹುದು; ಆದರೆ ಅವರು ಸಾಂಸ್ಕಾರಿಕವಾಗಿ ಸಬ್ಬತ್ತನ್ನು ಹೊಲೆ ಮಾಡದವರಾಗಿದ್ದರು; ಸೂರ್ಯಾಸ್ತದ ನಂತರ ಶಿಲುಬೆಗಳ ಮೇಲೆ ದೇಹಗಳಿರಬಾರದು. ಬೇಗನೇ ಸಾಯುವಂತೆ ಮಾಡಲು ಕಾಲುಗಳು ಮುರಿಯಲ್ಪಡತ್ತಿದ್ದವು; ಆದರೆ ಯೇಸುವು ಆಗಲೇ ಸತ್ತು ಹೋಗಿದ್ದನು. ಸಿಪಾಯಿಯು ಈಟಿಯಿಂದ ತಿವಿದಾಗ ಬಂದ ನೀರು ರಕ್ತದಿಂದ ಇದು ಕಂಡುಬಂದಿತು. ಅರುಹು ಇಲ್ಲವೇ ಎರಡು ಪ್ರವಾದನೆಗಳು ನೆರವೇರಿಸಲ್ಪಟ್ಟಿದ್ದವು (ಕೀರ್ತನೆ 34:20; 22:16, 17). ಯೇಸುವಿನ ದೇಹವು ಆತನ ಇಬ್ಬರು ಶಿಷ್ಯರಿಗೆ ಅರಿಮಥಾಯದ ಯೋಸೇಫ ಮತ್ತು ನಿಕೊದೇಮರಿಗೆ ಒಪ್ಪಿಸಲ್ಪಟ್ಟಿತು; ಪ್ರೀತಿಯ ಹಸ್ತಗಳು ಅದನ್ನು ಯೋಸೇಫನ ಹೊಸ ಸಮಾಧಿಯಲ್ಲಿಡಲು ಸಿದ್ಧ ಪಡಿಸಿದವು; ಮತ್ತು ಭಯದಿಂದ ತುಂಬಿದ ಯೆಹೂದ್ಯರ ಬೇಡಿಕೆಯಂತೆ ರೋಮನ್ ಕಾವಲುಗಾರರು ಸಮಾಧಿಯನ್ನು ಭದ್ರಪಡಿಸಿದರು.

---

ಟಿಪ್ಪಣಿಳು

[1]ಮತ್ತಾಯ 26:49; ನೋಡಿರಿ ಲೂಕ 14:45; ಲೂಕ 22:47. [2]ಮಾರ್ಕ 14:61; ನೋಡಿರಿ ಮತ್ತಾಯ 26:63; ಲೂಕ 22:67. [3]ಮಾರ್ಕ 14:62; ನೋಡಿರಿ ಮತ್ತಾಯ 26:64. [4]ಮತ್ತಾಯ 26:66; ನೋಡಿರಿ ಮಾರ್ಕ 14:64. [5]ಮತ್ತಾಯ 26:75. [6]ಮತ್ತಾಯ 27:4. [7]ಲೂಕ 23:2. [8]ಯೋಹಾನ 18:40; ನೋಡಿರಿ ಮತ್ತಾಯ 27:20; ಮಾರ್ಕ 15:11; ಲೂಕ

23:18. [9]ಲೂಕ 23:34. [10]ಯೋಹಾನ 19:19; ನೋಡಿರಿ ಮತ್ತಾಯ 27:37; ಮಾರ್ಕ 15:26; ಲೂಕ 23:38.

[11]ಯೋಹಾನ 19:26, 27. [12]ಮತ್ತಾಯ 27:42; ಮಾರ್ಕ 15:31; ಲೂಕ 23:35. [13]ಲೂಕ 23:42. [14]ಲೂಕ 23:43. [15]ಮತ್ತಾಯ 27:46; ಮಾರ್ಕ 14:34. [16]ಯೋಹಾನ 19:28. [17]ಯೋಹಾನ 19:30. [18]ಲೂಕ 23:46. [19]ಮತ್ತಾಯ 27:54; ಮಾರ್ಕ 15:39.

© 2009 Truth for Today